ನಿಗದಿ ಮಾಡಿರುತ್ತೇವೆ. without distillery and with distillery ಎಂದು. ಒಂದು ಟನ್ ಕಬ್ಬಿಗೆ 580 ರೂಪಾಯಿ ಬೆಲೆ ಕೊಡಬೇಕೆಂದು ನಿಗದಿ ಮಾಡಿದ್ದೇವೆ. ಆನೇಕ ಕಡೆ ಏನಾಗಿದೆಯೆಂದರೆ, 800 ರೂಪಾಯಿ ಕೊಡಿ, ಸಾವಿರ ರೂಪಾಯಿ ಕೊಡಿ ಎಂದು ರೈತರು ಹೋಗಿ ಕಾರ್ಖಾನೆಯವರಿಗೆ ಒತ್ತಾಯ ಮಾಡುತ್ತಾರೆ. ಅದು ಆ ಕಾರ್ಖಾನೆಯವರಿಗೆ ಮತ್ತು ಆ ರೈತರಿಗೆ ಬಿಟ್ಟಂಥಾದ್ದು. ನಮ್ಮ ಸರ್ಕಾರದ ಕಾನೂನು ಏನಿದೆ, ಆ ಕಾನೂನು ಪ್ರಕಾರ, ರೇಟ್ ಕೊಡಲಿಕ್ಕೆ ಅವರಿಗೆ ಒತ್ತಾಯ ಮಾಡಿದ್ದೇನೆ. ಇನ್ನೂ ಕೂಡ, ನಾನು ಮಾಡುತ್ತೇನೆ. ಅದು ಬಿಟ್ಟು, ಎಲ್ಲರೂ ತಮ್ಮ ತಮ್ಮ ಏರಿಯಾದಲ್ಲಿ ಸಾವಿರ ಕೊಡು ಎಂಟು ನೂರು ಕೊಡು, ಒಂಭೈನೂರು ಕೊಡು ಎಂದ್ದು ಹೇಳಿದರೆ, ಅದು ಆಗುವುದಿಲ್ಲ. ಇಳುವರಿ ಆಧಾರ ಇಟ್ಟುಕೊಂಡು, ಕೆಲವು ಸರ್ಕಾರದ ಇತಿಮಿತಿಗಳನ್ನು ಹೇಳಬೇಕಾಗುತ್ತದೆ. ಈಗಾಗಲೇ ಹಣಕಾಸಿನ ಮಂತ್ರಿಗಳಿಗೆ ನಾನು ಹೇಳಿದ್ದೇನೆ. ಮಂತ್ರಿಗಳೂ ಕೂಡ ಅವರನ್ನು ಕರೆಯಿಸಿ ಸಲಹೆ ಕೊಟ್ಟಿದ್ದಾರೆ. ಸನ್ಮಾನ್ಯ ಹಣಕಾಸಿನ ಮಂತ್ರಿಗಳೂ ಕೂಡ ಅವರನ್ನು ಕರೆಸಿ, ತೀವ್ರವಾದ ನಿರ್ಣಯವನ್ನು ಮಾಡಿ, ಈ ವಿಷಯದಲ್ಲಿ ಅವರಿಗೆ ಹೇಳುತ್ತಾರೆಂಬುದನ್ನು ಮಾನ್ಯ ಸದಸ್ಯರ ಗಮನಕ್ಕೆ ತರುತ್ತಿದ್ದೇನೆ.

ಒಬ್ಬ ಮಾನ್ಯ ಸದಸ್ಯರು:- ಮಾನ್ಯ ಅಧ್ಯಕ್ಷರೇ....

ಅಧ್ಯಕ್ಷರು:- ನೀವು ಇದಕ್ಕೆ ಸಹಿ ಮಾಡಿಲ್ಲವಲ್ಲ...

ಒಬ್ಬ ಸದಸ್ಯರು:- ರೈತರಿಗೆ ಕಡಿಮೆ ಕೊಟ್ಟರೆ ಹೇಗೆ? ರೈತರಿಗೆ ಬರುವುದು, ಫ್ಯಾಕ್ಟರಿಯವರಿಗೆ ಹೋದರೆ ಹೇಗೆ?

ಒಬ್ಬ ಸದಸ್ಯರು:- ನನ್ನದೊಂದು ವಿನಂತಿ. ಸರ್ಕಾರ ಈ ಬೆಲೆ ಬಗ್ಗೆ ಏನು ನಿಗದಿ ಮಾಡಿರುತ್ತದೆಯೋ ಅದರ ಬಗ್ಗೆ ಹೇಳುತ್ತೇನೆಯೇ ಹೊರತು, ನಾನು ಹೆಚ್ಚಿಗೆ ಹೇಳುವುದಿಲ್ಲ.

ಅಧ್ಯಕ್ಷರು:- ಯಾವ ಸದಸ್ಯರು ನೋಟೀಸ್‌ಗಳಿಗೆ ಸಹಿ ಮಾಡಿರುತ್ತಾರೆ ಪ್ರಶ್ನೆಗಳನ್ನು ಕಳುಹಿಸಿರುತ್ತಾರೆ. ಅವರು ಮಾತ್ರ ಕ್ಲಾರಿಫಿಕೇಶನ್ ಕೇಳಲು ಅವಕಾಶವಿರುತ್ತದೆ. ಬೇರೆಯವರಿಗೆ ಇರುವುದಿಲ್ಲ. ಈಗ ನೀವು 16-9-95 ಕ್ಕೆ ಆ ಕಾರ್ಖಾನೆಯನ್ನು ಪ್ರಾರಂಭ ಮಾಡಿಸುತ್ತೇವೆಂದು ಹೇಳಿದ್ದೀರಿ. ದಯಮಾಡಿ, ಆ ಬಗ್ಗೆ ನಿಮಗೆ ಗಮನವಿರಲಿ. ಇಲ್ಲದೇ ಹೋದರೆ ಪರಿಣಾಮ ಸರಿಹೋಗುವುದಿಲ್ಲ. ಈ ಸದನದಲ್ಲಿ ತಾವು ಖಚಿತವಾಗಿ 16-9-95ಕ್ಕೆ ಪ್ರಾರಂಭವಾಗುತ್ತದೆಂದು ಹೇಳಿದ್ದೀರಿ. ಅದು ಆಗದೇ ಹೋದರೆ, ನೀವು ಸದನಕ್ಕೆ ಕೊಟ್ಟ ಮಾತಿಗೆ ತಪ್ಪಿದಂತಾಗುತ್ತದೆ ಆದ್ದರಿಂದ ನಿಮಗೆ ಎಚ್ಚರಿಕೆಯನ್ನು ಕೊಡುತ್ತಿದ್ದೇನೆ.

ದ.ಅ. ನಿಯಮ 351ರ ಮೇರೆಗೆ

1) ವಿಷಯ:- ಹೆಣ್ಣೂರು ಬಾಣಸವಾಡಿ ರಸ್ತೆ ಒಂದನೇ ಬ್ಲಾಕಿನಲ್ಲಿರುವ 10ನೇ ಮುಖ್ಯ ರಸ್ತೆಯಲ್ಲಿ, ಪೈಪು ಜೋಡಿಸಿದ್ದರೂ ಕೂಡ ನೀರು ಕೊಡದಿರುವ ಬಗ್ಗೆ.

ಶ್ರೀ ಎಸ್.ಸುರೇಶ್‌ಕುಮಾರ್ (ರಾಜಾಜಿನಗರ):- ಮಾನ್ಯ ಅಧ್ಯಕ್ಷರೇ, ಬೆಂಗಳೂರಿನ ಹೆಣ್ಣೂರು-ಬಾಣಸವಾಡಿ ರಸ್ತೆ ಒಂದನೇ ಬ್ಲಾಕ್‌ನಲ್ಲಿರುವ 10ನೇ ಮುಖ್ಯ ರಸ್ತೆ ಹಾಗೂ 10ನೇ ಎ, ಬಿ ಮತ್ತು ಇ ರಸ್ತೆಯಲ್ಲಿ ಕಳೆದ 11 ವರ್ಷಗಳಿಂದ ನೀರು ಸರಬರಾಜಿಗೆ ಪೈಪುಗಳನ್ನು ಜೋಡಿಸಲಾಗಿದ್ದರೂ ಕೂಡ ನೀರು ಕೊಟ್ಟಿರುವುದಿಲ್ಲ. ಹಾಗೂ ಈ ಪ್ರದೇಶಗಳಲ್ಲಿ ಮೂಲಭೂತ ಅವಶ್ಯಕತೆಗಳಾದ ಒಳಚರಂಡಿ, ರಸ್ತೆಗಳಿಗೆ ಡಾಂಬರು ಹಾಕುವ ಕೆಲಸಗಳು

ಇದುವರೆಗೂ ಕೈಗೊಳ್ಳದಿರುವುದರಿಂದ, ಈ ಪ್ರದೇಶದಲ್ಲಿ ವಾಸಿಸುತ್ತಿರುವ ಜನರಿಗೆ ತುಂಬಾ ತೊಂದರೆಯುಂಟಾಗಿದೆ. ಆದಕಾರಣ ಸರ್ಕಾರ ಇನ್ನು ಎಷ್ಟು ದಿನಗಳಲ್ಲಿ ನೀರಿನ ಸೌಕರ್ಯವನ್ನು ಕಲ್ಪಿಸುತ್ತದೆ ಹಾಗೂ ಒಳಚರಂಡಿ ವ್ಯವಸ್ಥೆಯನ್ನು ಕೈಗೊಳ್ಳಲು ಬೇಕಾಗುವ ಕಾಲವನ್ನು ನಿಗದಿಪಡಿಸಲಾಗುವುದೇ?

ಶ್ರೀ ಆರ್.ರೋಷನ್‌ಬೇಗ್ (ಬೆಂಗಳೂರು ನಗರಾಭಿವೃದ್ಧಿ ಮತ್ತು ವಕ್ಫ್ ರಾಜ್ಯ ಸಚಿವರು):- ಮಾನ್ಯ ಅಧ್ಯಕ್ಷರೆ, ಹೆಣ್ಣೂರುರಸ್ತೆ, ಬಾಣಸವಾಡಿ ರಸ್ತೆ ಬಡಾವಣೆಯ ರೂ.960 ಲಕ್ಷಗಳ ಯೋಜನೆಗೆ ಸರ್ಕಾರದ ಆದೇಶ ಸಂಖ್ಯೆ ಹೆಚ್ ಎಂ ಎ 101 ಎಂಎನ್‌ಜೆ 75 ದಿನಾಂಕ 27-1-1978ರಲ್ಲಿ ಸರ್ಕಾರದ ಮಂಜೂರಾತಿಯನ್ನು ನೀಡಲಾಗಿರುತ್ತದೆ. 1200 ಎಕರೆ ಜಮೀನಿಗೆ ಪ್ರಾರಂಭಿಕ ಅಧಿಸೂಚನೆಯನ್ನು 1977 ರಲ್ಲಿಯೂ ಅಂತಿಮ ಅಧಿಸೂಚನೆಯನ್ನು 1980 ರಲ್ಲಿಯೂ ಹೊರಡಿಸಲಾಗಿದೆ.

ಅಧಿಸೂಚಿಸಲಾದ 1200 ಎಕರೆ ಜಮೀನಿನಲ್ಲಿ 481 ಎಕರೆ 20 ಗುಂಟೆ ಜಮೀನನ್ನು ಭೂಸ್ವಾಧೀನಪಡಿಸಿಕೊಂಡು ಬಡಾವಣೆಯನ್ನು ನಿರ್ಮಿಸಲು ಇಂಜಿನಿಯರಿಂಗ್ ವಿಭಾಗಕ್ಕೆ ವಹಿಸಲಾಗಿದೆ. ಈ ಬಡಾವಣೆಯಲ್ಲಿ ವಿವಿಧ ಅಳತೆಯ 3,933 ನಿವೇಶನಗಳನ್ನು ನಿರ್ಮಿಸಿ ವಾಣಿಜ್ಯ ಹಾಗೂ ಅಂಗಡಿ ನಿವೇಶನಗಳನ್ನು ಹೊರತುಪಡಿಸಿ ಹಂಚಿಕೆ ಮಾಡಲಾಗಿದೆ. ಹಂಚಿಕೆ ಮಾಡಲಾದ ನಿವೇಶನಗಳಲ್ಲಿ ಶೇ.40 ರಷ್ಟು ಹಂಚಿಕೆದಾರರು ಮನೆಗಳನ್ನು ನಿರ್ಮಿಸಿಕೊಂಡು ವಾಸಿಸುತ್ತಿದ್ದಾರೆ.

ರಸ್ತೆಗಳ ನಿರ್ಮಾಣ, ಮಳೆನೀರಿನ ಚರಂಡಿ ನಿರ್ಮಾಣ, ರಸ್ತೆಗಳಿಗೆ ಜಲ್ಲಿ ಹಾಕಿ ಡಾಂಬರೀಕರಣ ವ್ಯವಸ್ಥೆಯ ಎಲ್ಲಾ ಕಾಮಗಾರಿಗಳು ಪೂರ್ಣಗೊಂಡಿರುತ್ತವೆ.

ನೀರಿನ ಸೌಲಭ್ಯ ಹಾಗೂ ಒಳಚರಂಡಿ ವ್ಯವಸ್ಥೆಯ ಅಂದಾಜು ವೆಚ್ಚವು ಕ್ರಮವಾಗಿ ರೂ.345 ಲಕ್ಷ ಹಾಗೂ 227 ಲಕ್ಷಗಳಾಗಿವೆ. ನೀರಿನ ಸೌಲಭ್ಯ ಹಾಗು ಒಳಚರಂಡಿ ವ್ಯವಸ್ಥೆಯ ಕಾರ್ಯಗಳನ್ನು ಕೈಗೊಳ್ಳಲು ಬೆಂಗಳೂರು ನೀರು ಸರಬರಾಜು ಮತ್ತು ಒಳಚರಂಡಿ ಮಂಡಳಿಗೆ ಬೆಂಗಳೂರು ಅಭಿವೃದ್ಧಿ ಪ್ರಾಧಿಕಾರವು ಕ್ರಮವಾಗಿ ರೂ.270 ಲಕ್ಷ ಹಾಗೂ ರೂ.187.26 ಲಕ್ಷಗಳನ್ನು ಠೇವಣಿ ಮಾಡಿದೆ. ಈ ಬಡಾವಣೆಯಲ್ಲಿ ಬೀದಿ ದೀಪದ ಸೌಲಭ್ಯವನ್ನೊಳಗೊಂಡಂತೆ ವಿದ್ಯುಚ್ಛಕ್ತಿ ಸೌಲಭ್ಯವನ್ನು ಪೂರ್ಣಗೊಳಿಸಲಾಗಿದೆ.

ಬೆಂಗಳೂರು ನೀರು ಸರಬರಾಜು ಮತ್ತು ಒಳಚರಂಡಿ ಮಂಡಳಿಯು ಕೈಗೊಂಡಿರುವ ನೀರು ಸರಬರಾಜು ಹಾಗೂ ಒಳಚರಂಡಿ ವ್ಯವಸ್ಥೆಯ ಕಾರ್ಯಗಳ ಇತ್ತೀಚಿನ ಹಂತವು ಈ ಕೆಳಕಂಡಂತಿದೆ.

ನೀರು ಸರಬರಾಜು:

ಬಡಾವಣೆಯನ್ನು 3 ಬ್ಲಾಕ್‌ಗಳಾಗಿ ನಿರ್ಮಿಸಲಾಗಿದೆ. ಒಂದನೇ ಬ್ಲಾಕ್‌ನಲ್ಲಿ ಕೆಲಸವು ಶೇ.75 ರಷ್ಟು 2ನೇ ಬ್ಲಾಕ್‌ನಲ್ಲಿ ಶೇ.10ರಷ್ಟು ಪ್ರಗತಿಯಲ್ಲಿದ್ದು, 3ನೇ ಬ್ಲಾಕ್‌ನಲ್ಲಿ ಶೇ.20 ರಷ್ಟು ಪೂರ್ಣಗೊಂಡಿದೆ. ಬೆಂಗಳೂರು ನೀರು ಸರಬರಾಜು ಮತ್ತು ಒಳಚರಂಡಿ ಮಂಡಳಿಯನ್ನು ನಿರಂತರವಾಗಿ ಉಳಿದ ಕೆಲಸಗಳನ್ನು ಪೂರ್ಣಗೊಳಿಸಲು ಒತ್ತಾಯಿಸಲಾಗಿದೆ.

ನೀರಿನ ಬವಣೆಯನ್ನು ತಪ್ಪಿಸಲು ಕೈಪಂಪನ್ನು ಅಳವಡಿಸುವ ಮೂಲಕ ಬೆಂಗಳೂರು ಅಭಿವೃದ್ಧಿ ಪ್ರಾಧಿಕಾರವು ಪರ್ಯಾಯ ವ್ಯವಸ್ಥೆ ಮಾಡಿದೆ. 13 ಕೊಳವೆ ಬಾವಿಗಳನ್ನು ಕೊರೆದು

ಕೈಪಂಪನ್ನು ಅಳವಡಿಸಲಾಗಿದೆ. ಟ್ಯಾಂಕ್‌ಗಳ ಮೂಲಕ ನೀರನ್ನು ಬೆಂಗಳೂರು ನೀರು ಸರಬರಾಜು ಮತ್ತು ಒಳಚರಂಡಿ ಮಂಡಳಿಯ ಮೂಲಕ ಒದಗಿಸಲು ವ್ಯವಸ್ಥೆ ಮಾಡಲಾಗಿದೆ.

ಒಳಚರಂಡಿ ವ್ಯವಸ್ಥೆ:-ಬೆಂಗಳೂರು ನೀರು ಸರಬರಾಜು ಮತ್ತು ಒಳಚರಂಡಿ ಮಂಡಳಿಯು ಶೇ.80 ರಷ್ಟು ಒಳಚರಂಡಿ ವ್ಯವಸ್ಥೆಯ ಕೆಲಸಗಳನ್ನು ಪೂರ್ಣಗೊಳಿಸಿದೆ. ನೀರು ಸರಬರಾಜು ವ್ಯವಸ್ಥೆಯ ಕಾಮಗಾರಿಗಳು ಪೂರ್ಣಗೊಂಡ ನಂತರ ಒಳಚರಂಡಿ ಸಂಪರ್ಕಗಳನ್ನು ಪ್ರತಿಯೊಂದು ಮನೆಗೆ ನೀಡಲಾಗುವುದು. ಬಡಾವಣೆಯ ರಸ್ತೆಗಳ ಪೈಕಿ ಸುಮಾರು ಶೇ.80 ರಷ್ಟು ರಸ್ತೆಗಳಿಗೆ ಡಾಂಬರೀಕರಣ ಮಾಡಲಾಗಿದೆ.

2) ದಿನಗೂಲಿ ನೌಕರರನ್ನು ಖಾಯಂ ಮಾಡುವ ಕುರಿತು

ಶ್ರೀ ಕುಂಬ್ಳೆ ಸುಂದರರಾವ್ (ಸುರತ್ಕಲ್):- ಮಾನ್ಯ ಅಧ್ಯಕ್ಷರೆ, ಸರಕಾರದ ವಿವಿಧ ಇಲಾಖೆಯ ಕಚೇರಿಗಳಲ್ಲಿ 1-7-1984 ರಿಂದ ದಿನಗೂಲಿ ನೌಕರರಾಗಿ ಸಾಕಷ್ಟು ಜನರು ಸೇವೆ ಸೆಲ್ಲಿಸುತ್ತಿದ್ದು ಅವರುಗಳನ್ನು ಪೂರ್ಣ ಪ್ರಮಾಣದಲ್ಲಿ ಇದು ತನಕವೂ ಖಾಯಂ ಮಾಡಿಲ್ಲದೇ ಇರುವುದರಿಂದ ಅವರಲ್ಲಿ ಅನಿಶ್ಚಿತತೆಯ ಸ್ಥಿತಿಯು ಉಂಟಾಗಿದೆ. 1-7-84ರ ನಂತರ ಸೇರಿರುವ ಸಹಾಯಕ ಇಂಜಿನಿಯರ್ ಜ್ಯೂನಿಯರ್ ಇಂಜಿನಿಯರ್‌ಗಳ ಸೇವೆಯನ್ನು ಈಗಾಗಲೇ ಖಾಯಂಗೊಳಿಸಲಾಗಿದೆ. ಆದರೆ ಬಾಕಿ ಇತರ ಹುದ್ದೆಗಳಲ್ಲಿರುವ ದಿನಗೂಲಿ ನೌಕರರನ್ನು ಖಾಯಂ ಮಾಡುವ ಬಗ್ಗೆ ಪೂರ್ಣಪ್ರಮಾಣದಲ್ಲಿ ಸರಕಾರದವರು ಕ್ರಮ ತೆಗೆದುಕೊಂಡಿಲ್ಲದ ಕಾರಣ ಅಂಥ ನೌಕರರು ಚಿಂತಿತರಾಗುವಂತೆ ಆಗಿದೆ.

ಆದುದರಿಂದ ನಿಯಮಗಳ ಪ್ರಕಾರ ಯಾರು ದಿನಗೂಲಿ ನೌಕರರು ಎಂದು ಪರಿಗಣಿಸಲ್ಪಟ್ಟಿರುತ್ತಾರೋ ಯಾರ ಸೇವೆಯು ಹತ್ತು ವರ್ಷಗಳಿಗಿಂತ ಹೆಚ್ಚು ಆಗಿದೆಯೋ ಅಂಥವರೆಲ್ಲರನ್ನು ಖಾಯಂಗೊಳಿಸುವ ಬಗ್ಗೆ ಸರಕಾರದವರು ಸಕಾಲಿಕ ಕ್ರಮವನ್ನು ಜರುಗಿಸಿ ಸಹಸ್ರಾರು ಕುಟುಂಬಗಳಿಗೆ ಅನುಕೂಲ ಮಾಡಿಕೊಡಬೇಕೆಂದು ಸನ್ಮಾನ್ಯ ಮುಖ್ಯಮಂತ್ರಿಯವರನ್ನು ವಿನಂತಿಸಿಕೊಳ್ಳುತ್ತೇನೆ.

ಶ್ರೀ ಶಿವಾನಂದ ಹೆಚ್.ಕೌಜಲಗಿ (ಲೋಕೋಪಯೋಗಿ ಸಚಿವರು):- ಮಾನ್ಯ ಅಧ್ಯಕ್ಷರೆ, ಧಾರವಾಡ ಜಿಲ್ಲಾ ಲೋಕೋಪಯೋಗಿ ಇಲಾಖೆಯ ದಿನಗೂಲಿ ನೌಕರರ ಸಂಘವು ಸರ್ವೋಚ್ಚ ನ್ಯಾಯಾಲಯದಲ್ಲಿ ಸಲ್ಲಿಸಿದ್ದ ರಿಟ್ ಅರ್ಜಿ ಸಂಖ್ಯೆ:8307-11:83 ರಲ್ಲಿ ಸರ್ವೋಚ್ಚ ನ್ಯಾಯಾಲಯವು ದಿನಾಂಕ 23-2-90 ರಂದು ತನ್ನ ಅಂತಿಮ ತೀರ್ಪಿನಲ್ಲಿ ರಾಜ್ಯ ಸರ್ಕಾರದ ವಿವಿಧ ಇಲಾಖೆಗಳಲ್ಲಿ ದಿನಾಂಕ 1-7-84 ರಂದು ಅಥವಾ ಅದಕ್ಕಿಂತ ಮೊದಲು ನೇಮಕಗೊಂಡ ಸಾಂದರ್ಭಿಕ: ದಿನಗೂಲಿ ನೌಕರರನ್ನು ದಿನಾಂಕ 31-12-97 ರೊಳಗಡೆ ಸರ್ಕಾರಿ ಸೇವೆಯಲ್ಲಿ ವಿಲೀನಗೊಳಿಸುವಂತೆ ನೀಡಿದ ಆದೇಶದ ಮೇರೆಗೆ ಸರ್ಕಾರಿ ಆದೇಶ ಸಂಖ್ಯೆ:ಸಿಆಸುಇ 2 ಎಸ್ ಎಲ್ ಸಿ 90, ದಿನಾಂಕ 6-8-90 ರ ಆದೇಶವನ್ನು ಹೊರಡಿಸಲಾಗಿದೆ.

(2) ಲೋಕೋಪಯೋಗಿ ಇಲಾಖೆ, ನೀರಾವರಿ ಇಲಾಖೆ, ರೇಷ್ಮೆ ಇಲಾಖೆ ಮತ್ತು ಇತರೆ ಇಲಾಖೆಗಳಲ್ಲಿ ಕೆಲಸ ಮಾಡುತ್ತಿರುವ ಕೆಲವೊಂದು ಪದವೀಧರ ಇಂಜಿನಿಯರ್‌ಗಳು ಮತ್ತು ಡಿಪ್ಲೋಮಾ ಇಂಜಿನಿಯರ್‌ಗಳು ಸರ್ವೋನ್ನತ ನ್ಯಾಯಾಲಯದಲ್ಲಿ ರಿಟ್ ಅರ್ಜಿ ಸಂಖ್ಯೆ: 737:90, 738:90 1038:90 ಮತ್ತು 297:91ನ್ನು ಸಲ್ಲಿಸಿ, ತಮ್ಮ ಸೇವೆಯನ್ನು ಸಕ್ರಮಗೊಳಿಸುವಂತೆ ಮತ್ತು ಸಮಾನ ಕೆಲಸಕ್ಕೆ ಸಮಾನ ವೇತನ ನೀಡುವಂತೆ ಕೋರಿದ್ದು,